ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 10/3/2021

# ಪ್ರಬಲರನ್ನು 2ಎಗೆ ಸೇರಿಸಬೇಡಿ

## ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ

ಬೆಂಗಳೂರು: 2ಎ ಮೀಸಲಾತಿ ಪಡೆಯಲು ಪ್ರಬಲ ಸಮುದಾಯಗಳು ಹೋರಾಟ ನಡೆಸುತ್ತಿವೆ. ಆ ಮೂಲಕ ಅತಿ ಹಿಂದುಳಿದ ಸಮುದಾಯಗಳ ಅನ್ನ ಕಸಿಯಲು ಮುಂದಾಗಿರುವುದು ಆತಂಕ ಸೃಷ್ಟಿಸಿದೆ ಎಂದು ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಗೌರವಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹೇಳಿದ್ದಾರೆ.

ಪ್ರವರ್ಗ 2ಎ ಪಟ್ಟಿಯಲ್ಲಿರುವ ಹಿಂದುಳಿದ ಸಮುದಾಯಗಳ ಅಸ್ತಿತ್ವ ಕಾಪಾಡಬೇಕೆಂದು ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿ, ಅವರು ಮಾತನಾಡಿದರು.

### 24ರಂದು ಸಭೆ: ಹೆಗ್ಡೆ

**ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಮಾತನಾಡಿ, ಧ್ವನಿ ಇಲ್ಲದವರಿಗೆ ಆಯೋಗ ಧ್ವನಿಯಾಗಲು ಬದ್ಧವಾಗಿದೆ. ಮಾ.24ರಂದು ಸಭೆ ನಡೆಯಲಿದ್ದು, ಈ ವೇಳೆ ಹಿಂದುಳಿದ ಸಮುದಾಯಗಳು ಮನವಿ ಸಲ್ಲಿಸಬಹುದು. ಮನವಿ ನೀಡಿದವರಿಗೆ ನೋಟಿಸ್ ಕಳುಹಿಸಲಾಗುತ್ತದೆ. ಅವರು ಬಂದು ದಾಖಲೆ ನೀಡಬಹುದು. ಬಳಿಕ ಸರ್ಕಾರಕ್ಕೆ ವರದಿ ತಲುಪಿಸಲಾಗುತ್ತದೆ ಎಂದರು.**

ಪಂಚಮಸಾಲಿ ಸಮುದಾಯ ಸೇರಿ, ಇತರೆ ಪ್ರಭಾವಿ ಸಮುದಾಯಗಳು 2ಎ ಮೀಸಲಾತಿಗೆ ಸರ್ಕಾರದ ಮೇಲೆ ಒತ್ತಡ ತರುತ್ತಿವೆ. ಈ ಬೆಳವಣಿಗೆ ಗಮನಿಸಿದರೆ, ರಾಜ್ಯದಲ್ಲಿ ಹಿಂದುಳಿದ ಸಮುದಾಯಗಳ ಉಳಿವು ಕಷ್ಟ ಸಾಧ್ಯವಾದಂತಿದೆ. 2ಎ ಪಟ್ಟಿಯಲ್ಲಿರುವ ಶೇ.15 ಮೀಸಲಾತಿಯನ್ನು 102 ಸಮುದಾಯಗಳು ಹಂಚಿಕೊಳ್ಳಬೇಕಿದೆ. ಇನ್ನೂ ಧ್ವನಿಯೇ ಇಲ್ಲದವರಿಗೆ ಮೀಸಲಾತಿ ತಲುಪಿಲ್ಲ, ಹೀಗಾಗಿ ಪ್ರಬಲ ಸಮುದಾಯಗಳನ್ನು 2ಎಗೆ ಸೇರ್ಪಡೆಗೊಳಿಸಿ, ಸಣ್ಣ ಸಮುದಾಯಗಳ ತಲೆ ಮೇಲೆ ಚಪ್ಪಡಿ ಕಲ್ಲು ಹೊರಿಸಬಾರದು ಎಂದು ಒತ್ತಾಯಿಸಿದರು.



### ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ನಿಯೋಗ

ಪ್ರಬಲ ಜಾತಿಗಳನ್ನು 2ಎಗೆ ಸೇರ್ಪಡೆಗೊಳಿಸಬಾರದು, ಈ ಬಗ್ಗೆ ರಚನೆ ಮಾಡಿರುವ ಉನ್ನತ ಮಟ್ಟದ ಸಮಿತಿಯನ್ನು ರದ್ದುಗೊಳಿಸಬೇಕು ಮತ್ತು ಪ್ರಬಲ ಜಾತಿಗಳಿಗೆ ಬಜೆಟ್‌ನಲ್ಲಿ ನೀಡಿರುವ ಅನುದಾನದ ರೀತಿಯಲ್ಲಿಯೇ, ಅತಿ ಹಿಂದುಳಿದ ಸಮುದಾಯಗಳಿಗೆ ಹೆಚ್ಚಿನ ಅನುದಾನ ನೀಡಬೇಕೆಂದು ಅತಿ ಹಿಂದುಳಿದ ವರ್ಗಗಳ ವೇದಿಕೆಯ ನಿಯೋಗ ಮಂಗಳವಾರ ಸಿಎಂ ಯಡಿಯೂರಪ್ಪ, ಹಿಂದುಳಿದ ವರ್ಗಗಳ ಆಯೋಗ, ಸಚಿವ ಕೋಟ ಶ್ರೀನಿವಾಸ ಪೂಜಾರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

**ಹಿಂದುಳಿದ ವರ್ಗಗಳಿಗೆ ಹೆಚ್ಚು ಅನುದಾನ:** ಮನವಿ ಸ್ವೀಕರಿಸಿ ಮಾತನಾಡಿದ ಸಿಎಂ ಯಡಿಯೂರಪ್ಪ ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ವೇದಿಕೆಯ ಇತರೆ ಬೇಡಿಕೆ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

**ಹಿಂದುಳಿದ ವರ್ಗಗಳ ಶಾಸಕ ಸಭೆ:** ಇದೇ ವೇಳೆ ನಿಯೋಗವು, ಶಾಸಕರ ಭವನದಲ್ಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಭೇಟಿ ಮಾಡಿತು. ಈ ವೇಳೆ ಮಾತನಾಡಿದ ಸಚಿವರು, ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಗಮನ ಸೆಳೆಯುವ ಉದ್ದೇಶದಿಂದ ಹಿಂದುಳಿದ ವರ್ಗಗಳ ಶಾಸಕರೊಂದಿಗೆ ಸಭೆ ಏರ್ಪಡಿಸುವುದಾಗಿ ತಿಳಿಸಿದರು.

**ಭುಗಿಲೆದ್ದ ಮೀಸಲಾತಿ ಜ್ವರ:** ವಿಧಾನ ಪರಿಷತ್ ಸದಸ್ಯ ಕೆ.ಪಿ.ನಂಜುಂಡಿ ಮಾತನಾಡಿ, 2ಎ ಪಟ್ಟಿಯಲ್ಲಿರುವ ಸಣ್ಣ ಸಮುದಾಯಗಳಿಗೆ ಮೀಸಲಾತಿಯೇ ತಲುಪುತ್ತಿಲ್ಲ, ಈ ನಡುವೆ, ಪ್ರಬಲರು 2ಎ ಮೀಸಲಾತಿ ಕೇಳಿದರೆ ಅವರ ಗತಿ ಏನು? ಪ್ರತಿಯೊಬ್ಬರಿಗೂ ಮೀಸಲಾತಿ ಜ್ವರ ಬಂದಿದೆ. ಆಯೋಗ ರಾಜಕೀಯ ಹಾಗೂ ಕುರ್ಚಿ ಉಳಿಸಿಕೊಳ್ಳುವ ಒತ್ತಡಕ್ಕೆ ಮಣಿಯಬಾರದು. ಹಿಂದುಳಿದ ಸಮುದಾಯಗಳನ್ನು ಉಳಿಸಿ, ರಾಜ್ಯದ ಜನತೆಗೆ ನ್ಯಾಯ ಒದಗಿಸಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್, ವೇದಿಕೆ ಅಧ್ಯಕ್ಷ ಎಂ.ಸಿ.ವೇಣುಗೋಪಾಲ್, ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಿದರು.